**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 51/2017</u>**

ದಿನಾಂಕಃ 30.10.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 19 ಪ್ರಾಸಾ - 11

| | | |
|---|---|---|
| ಹೆಸರು | ಃ | ಗಂಗಾಧರ |
| ತಂದೆಯ/ಗಂಡನ ಹೆಸರು | ಃ | ಎಂ.ಬಿ.ಗುಡ್ಡತಿಮ್ಮಯ್ಯ |
| ವಯಸ್ಸು | ಃ | 43 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಕೆಂಪವಡೇರಹಳ್ಳಿ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಪಿರ್ಯಾದಿ ಪ್ರೇಮ ನನ್ನ ಹೆಂಡತಿ.

2. ದಿನಾಂಕ 13.02.2017 ರಂದು ನನ್ನ ಮನೆಯಲ್ಲಿ ಕಳ್ಳತನವಾಗಿತ್ತು. ಆ ದಿವಸ ನಾನು ಮತ ಚಲಾಯಿಸಲು ಕಟುಕನಪಾಳ್ಯಕ್ಕೆ ಮಧ್ಯಾಹ್ನ 12 ಗಂಟೆಗೆ ಹೋಗಿದ್ದೆ. ಅಲ್ಲಿ ಮತ ಚಲಾಯಿಸಿ ನಾನು ರಾಮನಗರಕ್ಕೆ ಬಂದೆ. ಆ ದಿವಸ ನನ್ನ ಮನೆಯಲ್ಲಿ ನನ್ನ ಹೆಂಡತಿ ಒಬ್ಬಳೇ ಇದ್ದಳು.

3. ಮಧ್ಯಾಹ್ನ 1 ಗಂಟೆಗೆ ನನ್ನ ಹೆಂಡತಿ ನನಗೆ ಫೋನ್ ಮಾಡಿ ಮನೆಯಲ್ಲಿ ಕಳ್ಳತನ ವಾಗಿದೆ ಬೇಗ ಬನ್ನಿ ಎಂದು ನನಗೆ ತಿಳಿಸಿದಳು, ಅದರಂತೆ ನಾನು ಮಧ್ಯಾಹ್ನ ಸುಮಾರು 2 ಗಂಟೆಗೆ ಮನೆಗೆ ಹೋದೆ.

4. ಆ ರೀತಿ ಬಂದ ಆರೋಪಿಗಳು ಸೀಮೆ ಹಸುವಿನ ಕರು ಇದೆಯಾ ಎಂದು ಕೇಳಲು ಬಂದು, ಇಲ್ಲ ಎಂದು ನನ್ನ ಹೆಂಡತಿ ಹೇಳಿದಾಗ ಕುಡಿಯಲು ನೀರು ಕೇಳಿದ ನಂತರದಲ್ಲಿ ಆಕೆಯ ಬಾಯಿಗೆ ಟವಲ್‌ನ್ನು ಸುತ್ತಿ ಮನೆಯೊಳಗೆ ಎಳೆದುಕೊಂಡು ಹೋಗಿ ದಿವಾನ್ ಕಾಟ್‌ನ ಮೇಲೆ ಹಾಕಿ, ಬೀರುವಿನ ಲಾಕ್‌ಗಳನ್ನು ಮುರಿದು ಒಡವೆ ಮತ್ತು ದುಡ್ಡುಗಳನ್ನು ದೋಚಿಕೊಂಡು ಹೋಗಿದ್ದಾರೆ ಎಂದು ನನ್ನ ಹೆಂಡತಿ ನನಗೆ ತಿಳಿಸಿದಳು.

5. ಆ ರೀತಿ ಮನೆಗೆ 3 ಜನ ಬಂದು ದೋಚಿಕೊಂಡು ಹೋಗಿದ್ದಾರೆ ಎಂದು ನನ್ನ ಹೆಂಡತಿ ತಿಳಿಸಿದಳು. ನಾನು ಮನೆಗೆ ಹೋಗಿ ನೋಡಿದಾಗ ಬೀರುವಿನ ಬಾಗಿಲು ಒಡೆದಿತ್ತು ಮತ್ತು ನೀರು ಚೆಲ್ಲಿದ್ದರು.

6. ನಮ್ಮ ಮನೆಯ ಬೀರುವಿನಲ್ಲಿ ಚಿನ್ನದ ನೆಕ್‌ಲೇಸ್, ಚಿನ್ನದ ಬಳೆಗಳು, ಚಿನ್ನದ ಬ್ರಾಸ್‌ಲೆಟ್, ಎರಡು ಜೊತೆ ಚಿನ್ನದ ಓಲೆಗಳು, ಚಿನ್ನದ ಸಣ್ಣ 20 ಗುಂಡುಗಳು, ಚಿನ್ನದ ಎರಡು ಉಂಗುರಗಳು, ರೂ.60,000/- ಇತ್ತು. ಅದನ್ನು ದೋಚಿಕೊಂಡು ಹೋಗಿದ್ದಾರೆ.

7. ನಾನು ತುಂಬಾ ಹಿಂದಿನಿಂದಲೂ ಸೀಮೆ ಹಸುಗಳನ್ನು ಸಾಕಿಕೊಂಡು ಹೈನುಗಾರಿಕೆ ಮಾಡುತ್ತಿದ್ದೇನೆ. ಅದರಿಂದ ಬಂದ ಆದಾಯದಿಂದ ನಾನು ಮೇಲೆ ತಿಳಿಸಿದ ಚಿನ್ನದ ಒಡವೆಗಳನ್ನು ಮತ್ತು ರೂ.60,000/- ವನ್ನು ಸಂಪಾದನೆ ಮಾಡಿ ಇಟ್ಟಿದ್ದೆ.

8. ಆನಂತರ ನಾನು ಮತ್ತು ನನ್ನ ಹೆಂಡತಿ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿದ್ದೇವೆ.

<u>ಪಾಟೀ ಸವಾಲುಃ</u> **ಶ್ರೀ.ಎಸ್.ಪಿ. ವಕೀಲರಿಂದ – ಆರೋಪಿಗಳ ಪರವಾಗಿಃ-**

9. ನನಗೆ ಮಾಸಿಕವಾಗಿ ಹೈನುಗಾರಿಕೆಯಿಂದ ರೂ.25,000 ರಿಂದ 30,000/- ಆದಾಯ ಇದೆ. ಕಟುಕನಪಾಳ್ಯದಿಂದ ನನ್ನ ಮನೆಗೆ ಸುಮಾರು 1 ¼ ಕಿ.ಮೀ. ದೂರ. ನನ್ನ ಮನೆಯಿಂದ ರಾಮನಗರಕ್ಕೆ 18 ಕಿ.ಮೀ. ದೂರ. ರಾಮನಗರದಿಂದ ನನ್ನ ಮನೆಗೆ ಹೋಗಬೇಕಾದರೆ ಸುಮಾರು ಅರ್ಧ ಗಂಟೆಯ ಸಮಯ ಸಾಕಾಗುತ್ತದೆ ಎನ್ನುವುದು ಸರಿ.

10. ನಮ್ಮ ಮನೆಯಲ್ಲಿ ಕಳ್ಳತನವಾದ ಆಭರಣಗಳ ಅಂದಾಜು ಮೌಲ್ಯ ರೂ.4,50,000 ರಿಂದ 5,00,000/-. ಆ ಒಡವೆಗಳನ್ನು ಮೊದಲು ಬ್ಯಾಂಕ್ ಲಾಕರ್‌ನಲ್ಲಿ ಇಟ್ಟಿದ್ದೆವು. ಅದನ್ನು ತೆಗೆದುಕೊಂಡು ಬಂದು ಸುಮಾರು 15 ದಿವಸ ಆಗಿತ್ತು.

11. ಆ ದಿವಸ ಕಳ್ಳತನ ಮಾಡಿದವರು ಯಾರು ಎಂದು ನನಗೆ ಗುರುತಿಸಲು ಆಗುವುದಿಲ್ಲ. ಕಾರಣ ಆ ದಿವಸ ನಾನು ಮನೆಯಲ್ಲಿ ಇರಲಿಲ್ಲ. ಆರೋಪಿಗಳು ನನ್ನ ಮನೆಯಲ್ಲಿ ಕಳ್ಳತನ ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.